3) ವಿಷಯ: ಹೈದರಾಬಾದ್ ಕರ್ನಾಟಕ ಗಡಿ ಭಾಗಗಳಾದ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಕೆಲವು ಹಳ್ಳಿಗಳ ಬಡ ಮೂರ್ತೆದಾರರಿಗೆ ಜೀವನೋಪಾಯ ಮತ್ತು ಪುನರ್ ವಸತಿ ಕಲ್ಪಿಸುವ ಬಗ್ಗೆ

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕ ಗಡಿ ಭಾಗಗಳಾದ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳ ಕೆಲವು ಹಳ್ಳಿಗಳ ಬಡ ಮೂರ್ತೆದಾರರಿಗೆ ಜೀವ ನೋಪಾಯ ಮತ್ತು ಪುನರ್ ವಸತಿ ಕಲ್ಪಿಸುವ ಬಗ್ಗೆ ಮಾನ್ಯ ಅಬಕಾರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಾದ್ಯಂತ ಮಾರಾಟವಾಗುತ್ತಿದ್ದ ಸೇಂದಿಯಲ್ಲಿ ಕಲಬೆರಕೆ ಯಾಗುತ್ತಿದ್ದ ದೂರುಗಳು ಇದ್ದು, ಇದನ್ನು ಗ್ರಹಿಸಿದ ಸರ್ಕಾರವು 1990 ರಿಂದ ಸೇಂದಿ ಮಾರಾಟವನ್ನು ನಿಷೇಧಿಸಿತ್ತು. ಸೇಂದಿ ಉತ್ತಾರು ಮಾಡಲು ಅಗತ್ಯ ಈಚಲು ಮರಗಳು ಇಲ್ಲದೇ ಇದ್ದು, ಸೇಂದಿಯಲ್ಲಿ CH (Chloral Hydrate) ಮತ್ತು ಡೈಜೆಫಾಂ ಮುಂತಾದ ನಿರ್ಬಂಧಕ ವಿಷ ವಸ್ತುಗಳ ಕಲಬೆರಕೆ ಸರ್ಕಾರದ ನಿರ್ಧಾರಕ್ಕೆ ಕಾರಣವಾಗಿತ್ತು. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೇರಳವಾದ ತೆಂಗಿನ ಮರಗಳು ಇದ್ದು. ಇಲ್ಲಿನ ಸಂಸ್ಕೃತಿ ಮತ್ತು ಸಾಮಾಜಿಕ ಅಗತ್ಯಗಳನ್ನು ಪರಿಗಣಿಸಿದ ಸರ್ಕಾರವು ಈ ಎರಡು ಜಿಲ್ಲೆಗಳಲ್ಲಿ ಮೂರ್ತೆದಾರರ ಸಹಕಾರ ಸಂಘಗಳ ಮೂಲಕ ಸೇಂದಿ ಮಾರಾಟಕ್ಕೆ ಅನುಮತಿ ನೀಡಿತ್ತು. ಈ ಎರಡು ಜಿಲ್ಲೆಗಳಿಗೆ ಇಲ್ಲಿಯವರೆಗೆ ಕಲಬೆರಕೆ ಸೇಂದಿ ಬಗ್ಗೆ ದೂರುಗಳು ದಾಖಲಾಗಿರುವುದಿಲ್ಲ.

ಗುಲಬರ್ಗಾ (ಅವಿಭಜಿತ) ಜಿಲ್ಲೆಯ 4 ತಾಲ್ಲೂಕುಗಳು (ಚಿತ್ತಾಪುರ, ಸೇಡಂ, ಚಿಂಚೋಳಿ ಮತ್ತು ಯಾದಗಿರಿ) ಹಾಗೂ ರಾಯಚೂರು ಜಿಲ್ಲೆಯ 2 ತಾಲ್ಲೂಕುಗಳಲ್ಲಿ (ರಾಯಚೂರು ಮತ್ತು ದೇವದುರ್ಗ) 1998 ರಿಂದ 2004ರ ವರೆಗೆ ಸೇಂದಿ ಮಾರಾಟಕ್ಕೆ ಸರ್ಕಾರವು ಅನುಮತಿ ನೀಡಿತ್ತು. ಇಲ್ಲಿನ ಜನಸಂಖ್ಯೆ ಮತ್ತು ಸೇಂದಿ ಬೇಡಿಕೆಗೆ ಅನುಗುಣವಾಗಿ ಸೇಂದಿ ಮರಗಳು ಅಂದರೆ, ಈಚಲು/ತೆಂಗು ಇಲ್ಲವಾದ ಮತ್ತು ಹೇರಳ ಕಲಬೆರಕೆ ಕಾರಣಗಳಿಗಾಗಿ ಸರ್ಕಾರವು ಸೇಂದಿ ಮಾರಾಟವನ್ನು ನಿಷೇಧಿಸಿದ್ದು, ಈ ನೀತಿ ಮುಂದುವರೆದಿದೆ.

ಈ ಜಿಲ್ಲೆಗಳ ನೆರೆಯ ಆಂಧ್ರ ಪ್ರದೇಶದಲ್ಲಿ ಅಲ್ಲಿನ ಮೂರ್ತೆದಾರರ ಸಹಕಾರ ಸಂಘಗಳ ಮೂಲಕ ಸೇಂದಿ ಮಾರಾಟಕ್ಕೆ ಅವಕಾಶ ನೀಡಿದ್ದು, ಆಂಧ್ರ ಪ್ರದೇಶದ ಗಡಿ ಹೊಂದಿರುವ, ಕರ್ನಾಟಕದಲ್ಲಿ ಕಲಬೆರಕೆ ಹೆಂಡದ ಸಮಸ್ಯೆ ತೀವ್ರವಾಗಿರುತ್ತದೆ. ಸೇಂದಿ ಮಾರಾಟ ನಿಷೇದಿಸಿದ್ದರೂ 2004 ರಿಂದ 2011 ರ ವರೆಗೆ ಗುಲ್ಬರ್ಗಾ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜಫ್ತಾದ ಕಲಬೆರಕೆ ಸೇಂದಿ ವಿವರಗಳು ಈ ಕೆಳಗಿನಂತಿದೆ.

ಜಿಲ್ಲೆಯ ಹೆಸರು	ದಾಖಲಿಸಿದ ಪ್ರಕರಣಗಳು	ದಸ್ತಗಿರಿ ಮಾಡಿದ ಆರೋಪಿಗಳು	ಜಪ್ತಿ ಮಾಡಿದ ವಾಹನಗಳು	ಜಫ್ತಾದ ಸೇಂದಿ (ಲೀಟರ್‌ಗಳಲ್ಲಿ)
ಗುಲಬರ್ಗಾ	565	587	22	35,610
ಯಾದಗಿರಿ	130	195	5	6,500
ರಾಯಚೂರು	511	504	110	24,572
ಒಟ್ಟು	**1206**	**1286**	**137**	**66,682**

ಅಲ್ಲದೆ ಈ ಜಿಲ್ಲೆಗಳಲ್ಲಿ ಸೇಂದಿಯಲ್ಲಿ ಕಲಬೆರಕೆ ಮಾಡಲು ಅಬಕಾರಿ ಕಾಯ್ದೆಯಡಿ ನಿಷೇಧವಾದ 520 ಕೆ.ಜಿ. ಕ್ಲೋರಲ್ ಹೈಡ್ರೇಟ್‌ನ್ನು ಜಫ್ತು ಮಾಡಲಾಗಿದೆ. Narcotics Drugs and Psychotropic Substances ಕಾಯ್ದೆ 1985 ರಡಿ ನಿಷೇಧವಾದ ಡೈಜೆಫಾಂ ಎಂಬ ಔಷಧವನ್ನು ಸಹಾ ಸೇಂದಿ ಕಲಬೆರಕೆಯಾಗಿ ಬಳಸುತ್ತಿರುವ ವರದಿಗಳು ಬಂದಿರುತ್ತವೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಸರ್ಕಾರವು 2004ರ ನಂತರ ಈ ಜಿಲ್ಲೆಗಳಲ್ಲಿ ಸೇಂದಿ ಮಾರಾಟಕ್ಕೆ ನೀಡಿದ್ದ ಅನುಮತಿಯನ್ನು ಹಿಂತೆಗೆದು ಕೊಂಡಿರುತ್ತದೆ. ಈ ಜಿಲ್ಲೆಗಳಲ್ಲಿ ಮತ್ತೆ ಸೇಂದಿ ಮಾರಾಟ ಪ್ರಾರಂಭಿಸುವುದು, ಅಗತ್ಯ ಸೇಂದಿ ಮರಗಳ ಕೊರತೆ ಹಾಗೂ ಅಲ್ಲಿನ ಜನರ ಆರೋಗ್ಯ ಮತ್ತು ಭದ್ರತೆ ದೃಷ್ಟಿಯಿಂದ ಸೂಕ್ತವಲ್ಲ ಎಂಬ ಅಭಿಪ್ರಾಯವನ್ನು ಸರ್ಕಾರವು ಹೊಂದಿರುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಸಚಿವರ ಹೇಳಿಕೆಯನ್ನು ನೋಡಿದ್ದೇನೆ. ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಇಲ್ಲಿ ಮಾಡುವುದಕ್ಕೆ ಏನಾದರೂ ತೊಂದರೆ ಯಿದೆಯೇ? ಇದರಲ್ಲಿ ಒಂದು ಲಕ್ಷ ಕುಟುಂಬಗಳಿವೆ. 2005 ರಲ್ಲಿ ಇದನ್ನು ಕೊಡಬೇಕು

ಎನ್ನುವ ಒಂದು ಉದ್ದೇಶವಿತ್ತು. ಹಿಂದೆ ಈ ಬಗ್ಗೆ ಯಡಿಯೂರಪ್ಪನವರಿಗೆ ನಾನು ಅರ್ಜಿ ಕೊಟ್ಟಿದ್ದು, ಅವರು ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದರು. ಅವರಿಗೆ ಇದನ್ನು ಬಿಟ್ಟು ಬೇರೆ ಕೆಲಸ ಮಾಡಲು ಬರುವುದಿಲ್ಲ. ಆದ್ದರಿಂದ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಮಾಡಿರುವಂತೆ ಸೇಂದಿ ಮಾರಾಟ ಮಾಡುವುದಕ್ಕೆ ಗುಲ್ಬರ್ಗಾ ಮತ್ತು ರಾಯಚೂರುಗಳಲ್ಲಿಯೂ ದಯವಿಟ್ಟು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : 2004 ರಲ್ಲಿಯೇ ಸೇಂದಿ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಇದರ ಸೇವನೆಯಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ ಎನ್ನುವ ದೃಷ್ಟಿಯಿಂದ 2004 ರಲ್ಲಿ ಇದನ್ನು ನಿಷೇಧ ಮಾಡಲಾಗಿದೆ. ಮಾನ್ಯ ಹಿರಿಯ ಸದಸ್ಯರು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಗುಲಬರ್ಗಾ, ಯಾದಗಿರಿ, ರಾಯಚೂರುಗಳಲ್ಲಿ ಈಗಾಗಲೇ ಹೈದರಾಬಾದ್, ಆಂಧ್ರದಿಂದ CH Powder ಬರುತ್ತದೆ, ಅದನ್ನು ಕೆಲವು mix ಮಾಡಿ ಕುಡಿಯುತ್ತಾರೆ. ಅದನ್ನು ಸಂಪೂರ್ಣವಾಗಿ ತಡೆಯುವುದಕ್ಕೆ ಪ್ರಯತ್ನ ಮಾಡುತ್ತಿದೆ. ಅಲ್ಲಿ ಮೊದಲನೆಯದಾಗಿ ಸೇಂದಿ ತೆಗೆಯುವುದಕ್ಕೆ ಈಚಲು ಮತ್ತು ತೆಂಗಿನ ಮರಗಳಿಲ್ಲ. ಆ ಕಾರಣಕ್ಕೋಸ್ಕರ, ನಾವೇನಾದರೂ ಅವಕಾಶ ಕೊಟ್ಟರೆ CH Powder mix ಮಾಡಿ ಅಲ್ಲಿ ಮಾರಾಟ ಮಾಡಿ ನಾಳೆಗೆ ಕೇವಲ ಹತ್ತಾರು ಜನ ಮೂರ್ತೆದಾರರಿಗೆ ಅನುಕೂಲ ಮಾಡುವುದಕ್ಕೆ ಹೋಗಿ ಸಾವಿರಾರು ಜನ ಬಡವರಿಗೆ ತೊಂದರೆಯಾಗುತ್ತದೆನ್ನುವ ಕಾರಣಕ್ಕೋಸ್ಕರ 2004 ರಿಂದ ಸರ್ಕಾರ ಸೇಂದಿಯನ್ನು ನಿಷೇಧ ಮಾಡಿದೆ. ಅದಕ್ಕೆ ಸರ್ಕಾರ ಈಗಲೂ ಬದ್ಧವಾಗಿದೆ ಎಂದು ಹಿರಿಯ ಸದಸ್ಯರಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನೀವು ಬಿಗಿ ಮಾಡಿ. 1 ಲಕ್ಷದ 35 ಸಾವಿರ ಕುಟುಂಬಗಳಿಗೆ ಸೇಂದಿ ಮಾಡುವುದು ಬಿಟ್ಟರೆ ಬೇರೆ ಏನೂ ಉದ್ಯೋಗವಿಲ್ಲ. ಸಾರಾಯಿ ನಿಷೇಧ ಮಾಡಲಾಯಿತು. ಇವತ್ತು ನಮ್ಮನ್ನು ಬಯ್ಯುತ್ತಿದ್ದಾರೆ. ಮಾನ್ಯ ಕುಮಾರಸ್ವಾಮಿಯವರ ಸರ್ಕಾರವಿದ್ದಾಗ, ಹಳ್ಳಿಗಳ ಕಡೆ ಹೆಣ್ಣು ಮಕ್ಕಳು ಹೇಳಿದರೆಂದು ಸಾರಾಯಿ ನಿಷೇಧ ಮಾಡಿದರು. ಈಗೇನಾಗಿದೆ ಎಂದರೆ, ಹಳ್ಳಿ ಹಳ್ಳಿಯಲ್ಲಿ ಅಲ್ಲಿಯೇ machine ಹಾಕಿಕೊಂಡು ಬ್ರಾಂಡಿ ಮಾಡಿ 45 ರೂಪಾಯಿಗಳಿಗೆ ಮಾರುತ್ತಿದ್ದರೆ. ಮೊದಲು ಸಾರಾಯಿ ಪ್ಯಾಕೇಟ್

10–12 ರೂಪಾಯಿಗಳಿಗೆ ಸಿಗುತ್ತಿತ್ತು. ಈಗ 50 ರೂಪಾಯಿಗಳಾಗಿದೆ. ನಾನು ಅಬಕಾರಿ ಸಚಿವರನ್ನು ದೂಷಣೆ ಮಾಡುತ್ತಿಲ್ಲ. ಈ ರೀತಿಯ ಕೆಲಸ ಮಾಡುವ 1 ಲಕ್ಷದ 35 ಸಾವಿರ ಕಾರ್ಮಿಕರಿದ್ದಾರೆ. ನೀವು ರಾಯಚೂರು, ಗುಲಬರ್ಗಾಗಳಲ್ಲಿ ಮಾಡಿ. ಚಿತ್ತಾಪುರ ತಾಲ್ಲೂಕಿನಲ್ಲಿ ಚಿಟ್ಟನಹಳ್ಳಿ ಇರಬಹುದು, ಯಾದಗಿರಿ ತಾಲ್ಲೂಕು ಇರಬಹುದು, ರಾಯಚೂರಿನ ದೇವದುರ್ಗ ತಾಲ್ಲೂಕು– ಈ ರೀತಿಯ ಆರೇಳು ತಾಲ್ಲೂಕುಗಳಿವೆ. ಈಗಾಗಲೇ ಉಡುಪಿ ತಾಲ್ಲೂಕು, ಮಂಗಳೂರು ತಾಲ್ಲೂಕಿಗೆ ಸೇಂದಿ ಮಾರಾಟಕ್ಕೆ ಅನುಮತಿ ಕೊಟ್ಟಿದ್ದೀರಿ. ದಯಮಾಡಿ, ಇಲ್ಲಿಯೂ ಕೂಡ ಅವಕಾಶ ಕೊಡಿ. ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಮತ್ತೆ ಅಲ್ಲಿ ನಿಮ್ಮ ಎಂಎಲ್‌ಎ ಗಳು ಗೆಲ್ಲಬೇಕು. ಅದಕ್ಕಾಗಿ ರೇಣುಕಾಚಾರ್ಯರವರಿಗೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸುಭಾಷ್ ಆರ್. ಗುತ್ತೇದಾರ್ : ರೇವಣ್ಣನವರು ಮಹತ್ವವಾದ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೆ. ಮಾನ್ಯ ಮಂತ್ರಿಯವರೆ, ಅಲ್ಲಿ ಈಚಲು ಮರಗಳಿಲ್ಲ, CH Powder ಉಪಯೋಗಿಸಿ ಸೇಂದಿ ಮಾಡುತ್ತಿದ್ದಾರೆಂದು ಹೇಳಿದರು. ಚಿತ್ತಾಪುರ, ಚಿಂಚೋಳಿ, ಯಾದಗಿರಿ, ದೇವದುರ್ಗ, ರಾಯಚೂರು ಇಲ್ಲೆಲ್ಲ ಈಚಲು ಮರಗಳಿವೆ. ಸರ್ವೇ ಮಾಡಿಸುವುದಕ್ಕೆ ಹೇಳಿ. ಅಲ್ಲಿ ಎಲ್ಲಿ ಈಚಲು ಮರಗಳಿವೆ, ಅಲ್ಲಿ ಸೇಂದಿ ಮಾಡುವುದಕ್ಕೆ ಅವಕಾಶ ಕೊಡಿ. ಯಾವ ರೀತಿಯಾಗಿ ಉಡುಪಿ, ಮಂಗಳೂರಿಗೆ society type ನಲ್ಲಿ ಅವಕಾಶ ಕೊಟ್ಟಿದ್ದಾರೆ, ಅದೇ ತರಹ ಇಲ್ಲೂ ಕೊಟ್ಟರೆ ಆ ಬಡ ಜನರಿಗೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ, ಸೇಂದಿಯೂ ಹೋಯಿತು, ಸಾರಾಯಿಯೂ ಹೋಯಿತು. ಈಗ ಎರಡೂ ಹೋಗಿರುವುದರಿಂದ ನಮ್ಮ ಜನಕ್ಕೆ ಬಹಳ ತೊಂದರೆಯಾಗಿದೆ. ನಮ್ಮ ಜನರು ಸೇಂದಿ, ಸಾರಾಯಿಯನ್ನು ಮಾರಾಟ ಮಾಡಿಕೊಂಡು ಉಪ ಜೀವನ ಮಾಡುತ್ತಿದ್ದಾರೆಯೇ ಹೊರತು ಬೇರೆ ಯಾವುದೇ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಅವರು ಏನೂ ಕೆಲಸ ಇಲ್ಲದವರಾಗಿದ್ದಾರೆ. ಅದರ ಸಲುವಾಗಿ ಆ ತಾಲ್ಲೂಕುಗಳಲ್ಲಿ ಸೇಂದಿ ಮಾಡುವುದಕ್ಕೆ ಅವಕಾಶ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : CH Powder ನಿಂದ ಸೇಂದಿ ಮಾಡುತ್ತಿದ್ದುದು ನಿಜ. ಆದರೆ, ಗಿಡ ಇರುವ ಬಗ್ಗೆಯೂ ನೀವು ಸಮೀಕ್ಷೆ ಮಾಡಿಸಿ. CH Powder ನಿಂದ ಸೇಂದಿ ಮಾಡುತ್ತಿರುವುದನ್ನು ನೀವು

ನಿಯಂತ್ರಣ ಮಾಡಿ, ನಿಯಂತ್ರಣ ಮಾಡಬಾರದೆಂದು ನಾವು ಯಾವತ್ತೂ ಹೇಳುವುದಿಲ್ಲ. CH ನಿಯಂತ್ರಣ ಮಾಡಿ. ಆದರೆ, ಗಿಡಗಳ ಅಗತ್ಯವಿದ್ದರೆ ಸಮೀಕ್ಷೆಯಾದರೂ ಮಾಡಿಸಿ. ಆದರೆ, CH Powder ಬಳಸುವುದನ್ನು Control ಮಾಡಿ. ಸಮೀಕ್ಷೆ ಪ್ರಕಾರ ಆಮೇಲೆ ನಿರ್ಣಯ ಕೈಗೊಳ್ಳಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಮ್ಮ ಸರ್ಕಾರವಿದ್ದಾಗಲೇ ಅದನ್ನು ನಿಲ್ಲಿಸಿರುವುದು. ಅಲ್ಲಿ ಯಾವ ಈಚಲು ಮರಗಳು ಇಲ್ಲ, ಏನೂ ಇಲ್ಲ. ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಹೋಗಬೇಡಿ. ಮಾಡುವುದಾದರೆ, ಎಲ್ಲವನ್ನೂ ಒಟ್ಟಿಗೆ ಮಾಡಿ. ಸುಭಾಷ್ ಆರ್. ಗುತ್ತೇದಾರ್‌ರವರೆ, ನಾನು ಹಿಂದೆ ನೋಡಿದ್ದೇನೆ. ಯಾವನೋ ಒಬ್ಬ ಆಂಜನೇಯ ಎನ್ನುವವನು chemicals ಹಾಕಿ ಸೇಂದಿ ಮಾರಾಟ ಮಾಡಿ ಎಲ್ಲರನ್ನೂ ಸಾಯಿಸುತ್ತಿದ್ದ, ಅದಕ್ಕೇ ನಾನು ಅಲ್ಲಿ ನಿಲ್ಲಿಸಿದೆ. ಆದ್ದರಿಂದ, ಅಲ್ಲಿ ಸೇಂದಿಗೆ ಅವಕಾಶ ಕೊಡುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ. ರೇವಣ್ಣ : ಸಿದ್ದರಾಮಯ್ಯನವರು ಹೇಳಿದರು. ಆದರೆ, ಅಲ್ಲಿ 1 ಲಕ್ಷದ 35 ಸಾವಿರ ಕುಟುಂಬಗಳಿವೆ. ಸಿದ್ದರಾಮಯ್ಯನವರು, ಯಾರೋ CH Powder ಹಾಕಿ ಮಾರಾಟ ಮಾಡುತ್ತಿದ್ದ ಅದಕ್ಕೆ ನಿಲ್ಲಿಸಿದ್ದೇವೆಂದು ಹೇಳಿದರು. ಆ ರೀತಿ ಇದ್ದರೆ ಮಾಡಿ, ನಾವು ಬೇಡವೆಂದು ಹೇಳುವುದಿಲ್ಲ. ಈಗ ನಾನು ಬಡವರ ಬಗ್ಗೆ ಕೇಳುತ್ತಿದ್ದೇವೆ.

ಶ್ರೀ ಎಂ.ಪಿ. ರೇಣುಕಾಚಾರ್ಯ : ನಾನು ತಮ್ಮ ಮುಖಾಂತರ ಹಿರಿಯ ಸದಸ್ಯರಿಗೆ ವಿನಂತಿಸುತ್ತೇನೆ. ಅವರೂ ಕೂಡ ಸಚಿವರಾಗಿ ಆಡಳಿತ ನಡೆಸಿದವರು. ಅವರಿಗೂ ಸಹ ಎಲ್ಲ ಮಾಹಿತಿ ಇದೆ.

ಶ್ರೀ ಹೆಚ್. ಡಿ ರೇವಣ್ಣ : ಬೇಕಾದರೆ, ನೀವು ಪರಿಶೀಲನೆ ಮಾಡಿ.

ಶ್ರೀ ಎಂ.ಪಿ.ರೇಣುಕಾಚಾರ್ಯ: ಈಗಾಗಲೇ ಸುಭಾಷ್ ಆರ್.ಗುತ್ತೇದಾರ್ ಡಾ: ಶರಣ ಪ್ರಕಾಶ್‌ರವರು ಹೇಳಿದ್ದಾರೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಈಚಲು ಮರಗಳಿವೆ. ಅಲ್ಲಿ society ಮುಖಾಂತರ ಸೇಂದಿ ತೆಗೆದು ಮಾರಾಟ ಮಾಡುತ್ತಾರೆ. ಇದು ಬಹಳ ಅನಾದಿ ಕಾಲ ದಿಂದಲೂ ನಡೆದುಕೊಂಡು ಬಂದಿದೆ. ಈಗ ಮಾನ್ಯ ಪ್ರತಿ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು 2004ರಲ್ಲಿ ರಾಯಚೂರು, ಗುಲಬರ್ಗಾ ದಲ್ಲಿ ನಾವು ನಿಲ್ಲಿಸಿದ್ದೇವೆಂದು ಹೇಳಿದರು. ಅಲ್ಲಿ ಈಚಲು ಮರಗಳಿಲ್ಲ,

ತೆಂಗಿನ ಮರಗಳಿಲ್ಲ. ಸೇಂದಿ ತೆಗೆಯಲು ಗಿಡಗಳೇ ಇಲ್ಲವೆಂದರೆ basic ಆಗಿ ಎಲ್ಲಿಂದ ಸೇಂದಿ ತೆಗೆಯುತ್ತಾರೆ?

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಸರ್ವೇ ಮಾಡಿಸಿ. ಅಲ್ಲಿ ಎಲ್ಲಿದೆ ಅಲ್ಲಿಗೆ ಕೊಡಿ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಈಗಾಗಲೇ ಆ ಭಾಗದ ಮೂರ್ತೆದಾರರು ನನಗೂ ವಿನಂತಿ ಮಾಡಿದ್ದಾರೆ. ಸೇಂದಿ ಗಿಡದ ಬಗ್ಗೆ ಸರ್ವೇ ಮಾಡಿಸುತ್ತೇವೆ. ಆದರೆ, commit ಆಗುವುದಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸರ್ವೇ ಮಾಡಿಸುವು ದಕ್ಕಾದರೂ commit ಆಗಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸರ್ವೇ ಮಾಡಿಸಿ, ವರದಿ ತೆಗೆದುಕೊಂಡು ಮರ ಇದ್ದರೆ ಕೊಡಿ.

ಶ್ರೀ ಎಂ.ಪಿ. ರೇಣುಕಾಚಾರ್ಯ : ಸರ್ವೇ ಮಾಡಿಸುತ್ತೇನೆ.

4) ವಿಷಯ : ಹಳಿಯಾಳ ತಾಲ್ಲೂಕಿನಲ್ಲಿ ಹರಿಯುವ ಕಾಳಿ ನದಿ ನೀರನ್ನು ಭೂ ಪ್ರದೇಶಕ್ಕೆ ನೀರಾವರಿ ಅನುಕೂಲ ಮಾಡಿಕೊಡುವ ಕಾಮಗಾರಿಯನ್ನು 2012–13ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ವಿಷಯದ ಬಗ್ಗೆ

ಶ್ರೀ ಸುನೀಲ ವಿ. ಹೆಗಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಹಳಿಯಾಳ ತಾಲ್ಲೂಕಿನಲ್ಲಿ ಹರಿಯುವ ಕಾಳಿ ನದಿ ನೀರನ್ನು ಭೂ ಪ್ರದೇಶಕ್ಕೆ ನೀರಾವರಿ ಅನುಕೂಲ ಮಾಡಿಕೊಡುವ ಕಾಮಗಾರಿಯನ್ನು 2012–13ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ವಿಷಯದ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ನಾನೂ ನೀರಾವರಿ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ನೀವು ಧಾರಾಳವಿದ್ದೀರಿ, ಅದಕ್ಕೋಸ್ಕರ ಆ ಕಡೆಗೆ ಈ ವರ್ಷ 17 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಆ ಭಾಗದ ಶಾಸಕರು ಏನೂ ಕೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ನೀರು ಇರುವುದರಿಂದ ಕೇಳುತ್ತಿದ್ದಾರೆ. ದಯವಿಟ್ಟು, ಬೇರೇನೂ ಹೇಳದೆ, announce ಮಾಡಿ.